ಶ್ರೀ ಬಿ. ರಾಚಯ್ಯ.—ಅದೇ ತತ್ವವನ್ನ ಆ ಗ್ರಾಮಾಂತರ ಶಾಲೆಗಳ ವಿಚಾರದಲ್ಲೇಕೆ ಅನುಸರಿಸುತ್ತಿಲ್ಲ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಳ್ಳಿಗರಲ್ಲಿ ಆ ರೀತಿ ಮಾಡಲು ಸಾಧ್ಯವಿಲ್ಲ. ಕಾರಣವೇನೆಂದರೆ, ದೊಡ್ಡ ಪಟ್ಟಣಗಳಲ್ಲಿ ದೊಡ್ಡದೊಡ್ಡ ಸ್ಕೂಲುಗಳಿರುತ್ತವೆ. ಮತ್ತು ಅವುಗಳ ರಿಪೇರಿ ಕೆಲಸವನ್ನು ಕೈಗೊಳ್ಳುವಂಥ ಏಜೆನ್ಸಿಗಳು ಸಿದ್ಧವಾಗಿರುತ್ತವೆ. ಆದರೆ ಈ ಸೌಕರ್ಯಗಳು ಗ್ರಾಮಾಂತರಪ್ರದೇಶದಲ್ಲಿಲ್ಲ. ಆದ್ದರಿಂದ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ. ರಾಚಯ್ಯ.—ಆದ್ದರಿಂದಲೇ ಅಲ್ಲವೇ ಈಗಿನ ಸರ್ಕಾರದಲ್ಲಿ ಪಟ್ಟಣಕ್ಕೆದೊರೆಯುತ್ತಿರುವ ಪ್ರೋತ್ಸಾಹ ಗ್ರಾಮಾಂತರ ಪ್ರದೇಶಗಳಿಗೆ ದೊರೆಯುತ್ತಿಲ್ಲವೆಂದು ಹೇಳುತ್ತಿರುವುದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಆದರೆ ಹಳ್ಳಿಗಳಲ್ಲಿ ಶ್ರದ್ಧೆಯಿಂದ ಕೆಲಸಮಾಡತಕ್ಕಂಥ ಜನರಿರುತ್ತಾರೆ. ಅಲ್ಲಿ ಕೆಲಸ ಸುಲಭವಾಗಿ ನಡೆಯುತ್ತದೆಂದು ನಮ್ಮ ಭಾವನೆ.

ಶ್ರೀ ಬಿ. ರಾಚಯ್ಯ.—ಈಗ ಇರತಕ್ಕ ಆ ವಿಲೇಜ್ ಪಂಚಾಯಿತಿ ಆಕ್ಟಿನ ಪ್ರಕಾರ ಸರ್ಕಾರದವರು ಆ ಪಂಚಾಯಿತಿಗಳಿಗೆ ಕೊಡಬೇಕಾದ ಶೇಕಡ 12½ ರ ಮೊಬಲಗನ್ನು ಕೊಡುತ್ತಿದ್ದೀರಾ ?

ಅಧ್ಯಕ್ಷರು.—ಆ ಪ್ರಶ್ನೆ ಇದಕ್ಕೆ ಸಂಬಂಧಪಡುವುದಿಲ್ಲ.

ಶ್ರೀ ಬಿ. ರಾಚಯ್ಯ.—ಈ ದಿವಸ ಆ ಗ್ರಾಮಪಂಚಾಯತಿಗಳಲ್ಲಿ ಸಾಕಷ್ಟು ಫಂಡಿಲ್ಲದೆ ಇರುವುದರಿಂದ ಈ ಪಾಠಶಾಲೆಗಳ ಕಟ್ಟಡದ ರಿಪೇರಿ ಕೆಲಸಗಳು ತಡವಾಗುತ್ತವೆ ಎನ್ನುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ. ಆಫಂಡಿನಮೇಲೆ ಗಮನವಿರುವುದಕ್ಕಿಂತಲೂ ಹೆಚ್ಚಾಗಿ ಆ ಜನರಲ್ಲಿ ಶ್ರದ್ಧಾಮನೋಭಾವವಿರುವುದರಿಂದ ಅಲ್ಲಿಯ ಕೆಲಸಕಾರ್ಯಗಳು ಬಹಳ ಬೇಗ ಆಗುತ್ತವೆಂದು ನಮ್ಮ ಭಾವನೆ.

ಶ್ರೀ ಬಿ. ರಾಚಯ್ಯ.—ಆ ಗ್ರಾಮಪಂಚಾಯ್ತಿಗಳಲ್ಲಿ ಸಾಕಷ್ಟು ಹಣವಿಲ್ಲದ್ದರಿಂದ ಅಲ್ಲಿ ನಡೆಯಬೇಕಾದ ಚರಂಡಿ ಮೋರಿ ಕೆಲಸಗಳು ಸಹ ಸರಿಯಾಗಿ ನಡೆಯದೆ ಅವುಗಳೆಲ್ಲ ಬಹಳ ಹೀನಸ್ಥಿತಿಯಲ್ಲಿವೆ ಎನ್ನುವುದು ತಮ್ಮ ಗಮನಕ್ಕೆ ಬಂದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ಮೈನೂರು ನಗರದಲ್ಲಿರುವ ಪ್ರೈಮರಿ ಪಾಠಶಾಲೆಗಳ ಕಟ್ಟಡದ ರಿಪೇರಿಗಾಗಿ ವಿಲೇಜ್ ಪಂಚಾಯಿತಿ ಹಣವನ್ನು ಬಳಸುವುದಕ್ಕೆ ಆಕ್ಟಿನಲ್ಲಿ ಅವಕಾಶವಿಲ್ಲ ಎನ್ನುವುದು ತಮಗೆ ಗೊತ್ತಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಖರ್ಚುಮಾಡುವುದಕ್ಕೂ ಪ್ರಾವಿಷ್ಕ ಇದೆ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ಈ ಸ್ಕೂಲು ಬಿಲ್ಡಿಂಗುಗಳ ರಿಪೇರಿಯ ಬಗ್ಗೆ ಪಂಚಾಯಿತಿ ಫಂಡಿನಿಂದ ಹಣವನ್ನು ಖರ್ಚುಹಾಕುವುದಕ್ಕೆ ಸರ್ಕಾರಿ ಅಧಿಕಾರಿಗಳಿಗೆ ಆಕ್ಟಿನಲ್ಲಿ ಅವಕಾಶವಿಲ್ಲವೆನ್ನುವುದು ತಮಗೆ ಗೊತ್ತಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಟಿ.ಎಕ್. ಮೂಡಲಗಿರಿಗೌಡ.—ಸರ್ಕಾರದವರು ಈ ಹೊತ್ತು ಈ ವಿದ್ಯಾಭ್ಯಾಸದ ವಿಚಾರದಲ್ಲಿ ಹಳ್ಳಿಗೂ ಪಟ್ಟಣಕ್ಕೂ ಒಂದು ಡಿಸ್ಕ್ರಿಮಿನೇಷ್ಕ ಮಾಡುತ್ತಿದ್ದಾರೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಎಕ್. ಹುಚ್ಚಮಾಸ್ತಿಗೌಡ.—ಈಗ ಸರ್ಕಾರದವರು ವಸೂಲಾಗತಕ್ಕ ಜಮಾನು ಕಂದಾಯದಲ್ಲಿ ಗ್ರಾಮಪಂಚಾಯತಿಗಳಿಗೆ ಕೊಡತಕ್ಕ ದುಡ್ಡನ್ನು ಆ ಗ್ರಾಮಪಂಚಾಯತಿ ಫಂಡಿಗೆ ಅಲಾಟ್‌ಮಾಡುವಾಗ ಮೊಬಲಗಿನಲ್ಲಿ ಇಂತಿಂಥ ಭಾಗವನ್ನು ಈ ಪಾಠಶಾಲೆಗಳ ಕಟ್ಟಡಗಳ ರಿಪೇರಿಗೋಸ್ಕರವಾಗಿ ಉಪಯೋಗಿಸುವಂತೆ ಆ ಜಿಲ್ಲಾಧಿಕಾರಿಗಳು ಆ ಮೊಬಲಗನ್ನು ಅಲಾಟ್ ಮಾಡುವಾಗಲೇ ನೇರವಾಗಿ ಆ ಪಂಚಾಯಿತಿಯವರಿಗೆ ನೂಚನೆಕೊಡುವಂತೆ ಮಾಡತಕ್ಕ ವಿಷಯವನ್ನು ಸರ್ಕಾರದವರು ಪರಿಶೀಲನೆಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಷಯವನ್ನು ಆಲೋಚನೆಮಾಡುತ್ತೇವೆ.

Sri S. SRINIVASA IYENGAR.—Will the Government consider the question of entrusting the annual repairs of these buildings in villages to P.W.D. and recover the cost of contribution from the Village Panchayets ?

Sri A. G. RAMACHANDRA RAO.—There is probably some difficulty to do that.

Sri S. SRINIVASA IYENGAR.—May I know why the Government feel it difficult ?

Sri A. G. RAMACHANDRA RAO.—Because the funds of the Village Panchayets are small, as everybody knows.

Sri T. MARIAPPA.—Is it not a fact that the Government have taken over the responsibility of the primary education ?

Sri A. G. RAMACHANDRA RAO.—Yes, with the public co-operation it is being done.

Sri T. MARIAPPA.—Is it not a fact that primary education is no longer the responsibility of the Local Bodies ?

Sri A. G. RAMACHANDRA RAO.—There is no direct responsibility as such ; but there is moral responsibility.

District Board High Schools, Tumkur District.

Q.—431. Sri N. HUCHMASTHY GOWDA (Huliyurdurga).—

Will the Government be pleased to state :—

(*a*) the number of District Board High Schools in Tumkur District ;

(*b*) the names of such High Schools in respect of whose buildings money has been collected and the amount so collected for each ;

(*c*) of these high schools, the number of schools in respect of whose buildings work has been taken up ;

(*d*) the steps taken by them in respect of buildings whose work has not yet been taken up ?

A.—Sri A. G. RAMACHANDRA RAO (Minister for Law and Education).—

(*a*) 7.

(*b*) DISTRICT BOARD HIGH SCHOOLS.

			Rs.
1	Nagavalli	...	18,170
2	Kadaba	..	19,000
3	Godekere	...	12,500
4	Huliyar	..	17,000
5	Nonavinakere	...	25,000
6	Midagesi	...	17,510
7	Huliyurdurga	...	Information is being collected.

(*c*) One.

(*d*) The Director of Public Instruction has addressed the District Board, Tumkur, in the matter.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ಜಿಲ್ಲಾ ಬೋರ್ಡು ಹೈಸ್ಕೂಲುಗಳ ಪೈಕಿ ಆ ಹೈಸ್ಕೂಲುಗಳ ಕಟ್ಟಡಕ್ಕೆ ತಳಪಾಯ ಹಾಕಿ ಇಲ್ಲಿಗೆ ಆರು ವರ್ಷಗಳ ಮೇಲಾಗಿದೆ ಎನ್ನುವುದು ತಮಗೆ ಗೊತ್ತಿದೆಯೇ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಖಚಿತವಾಗಿ ಇಪ್ಪತ್ತೇ ವರ್ಷಗಳಾಗಿದೆ ಎನ್ನುವುದು ತಿಳಿಯದು. ಅಂತೂ ಬಹಳ ಹಿಂದೆಯೇ ಆ ಕಟ್ಟಡಗಳ ತಳಪಾಯ ಹಾಕಲಾಗಿದೆ ಎನ್ನುವುದು ಗೊತ್ತಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ಕಟ್ಟಡಗಳ ಕಾರ್ಯವನ್ನು ಕೈಗೊಳ್ಳಲು ಸರ್ಕಾರದವರಿಗೇನು ಅಭ್ಯಂತರವಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಭ್ಯಂತರ ವೇನೂ ಇಲ್ಲ. ಜಾಗ್ರತೆಯಾಗಿ ಕೆಲಸ ಕೈಗೊಳ್ಳಲಾಗುವುದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ಹೈಸ್ಕೂಲುಗಳ ಕಟ್ಟಡವನ್ನು ಆದಷ್ಟುಬೇಗ ಪೂರೈಸಲು 20 ಸಾವಿರ ರೂಪಾಯಿಗಳನ್ನು ಡೆಪಾಜಿಟ್ ಮಾಡಿರತಕ್ಕ ವಿಚಾರ ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ಬಗ್ಗೆ ಒಂದು ರಿಪೋರ್ಟನ್ನು ತರಿಸಲು ಬರೆದಿದ್ದೇವೆ. ಅದಿನ್ನೂ ಬಂದಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ಹೈಸ್ಕೂಲುಗಳ ಕೆಲಸವನ್ನು ಜಾಗ್ರತೆ ಮುಗಿಸಲು ಸಹಾಯಕ ವಾಗುವಂತೆ ಸರ್ಕಾರದವರು ತಮ್ಮ ಪರವಾಗಿ ಕೊಡಬೇಕಾದ ಗ್ರಾಂಟ್ ಮೊಬಲಗನ್ನು ಬೇಗ ಕೊಟ್ಟು ಕೆಲಸ ಪ್ರಾರಂಭಿಸುವಂತೆ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.— ಬೇಗ ಪರಿಶೀಲನೆ ಮಾಡುತ್ತೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಆ ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲು ಸಮಿತಿಯವರು ಈಗ ಈ ಕಾರ್ಯಕ್ಕಾಗಿ ಖಾಸಗೀ ಜನರು ಇಟ್ಟಿರುವ ಹಣ ವನ್ನು ಆ ಜಿಲ್ಲಾ ಬೋರ್ಡ್ ಫಂಡಿನಿಂದ ಪ್ರತ್ಯೇಕಿಸಿ ಇಟ್ಟುಕೊಂಡಿರುತ್ತಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟಿಸ್.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಖಾಸಗೀ ಜನರು ಈ ಸ್ಕೂಲು ಕಟ್ಟಡಕ್ಕಾಗಿ ಕೊಟ್ಟಿರುವ ನಿಧಿ ಯನ್ನು ಬೇರೆ ಕೆಲಸಗಳಿಗಾಗಿ ಜಿಲ್ಲಾ ಬೋರ್ಡಿನವರು ಸಂಪೂರ್ಣವಾಗಿ ಖರ್ಚು ಮಾಡಿರುವ ವಿಷಯ ತಮಗೆ ಗೊತ್ತಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ದಿವಸ ನಾಗವಲ್ಲಿ ಜಿಲ್ಲಾಬೋರ್ಡ್ ಹೈಸ್ಕೂಲಿನ ಕಟ್ಟಡದ ಕೆಲಸ 10-15 ಸಾವಿರ ರೂಪಾಯಿಗಳ ವರೆಗೆ ನಡೆದು ಈಗ ನಡೆಸಿರತಕ್ಕ ಕೆಲಸಕ್ಕೆ ಕೂಡ ಪಾವತಿ ಮಾಡಲು ಹಣವಿಲ್ಲದಂತಾಗಿದೆ ಎನ್ನುವುದು ಸರ್ಕಾರ ದವರಿಗೆ ಗೊತ್ತಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಜನರಿಂದ ವಸೂಲಾದ ಡೊನೇಷನ್ ಮೊಬಲಗು ಕೂಡ ಬೇರೆ ಕೆಲಸಗಳಿಗೆ ಖರ್ಚಾಗಿ ಈ ಕಟ್ಟಡದ ಕೆಲಸಕ್ಕೆ ಹಣ ವಿಲ್ಲದಂತಾಗಿದೆ ಎನ್ನುವ ವಿಚಾರ ಸರ್ಕಾರದ ಗಮ ನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಹಾಗೇನಾ ದರೂ ಆಗಿದ್ದರೆ ಈ ಖಾಸಗೀ ಜನರಿಂದ ಬಂದ ಫಂಡನ್ನು ಪ್ರತ್ಯೇಕವಾಗಿಟ್ಟು ಈ ಖರ್ಚು ಪೆಚ್ಚಿಗಳಿಗೇ ಪೇಮೆಂಟ್ ಮಾಡಲು ಅವಕಾಶ ಮಾಡುತ್ತೀರಾ ?

Mr. SPEAKER.—It is a hypothetical question. He does not know the position.

Sri T. N. MUDALAGIRI GOWDA.—It is the duty of the Government to put the grant separate. . .

Sri A. G. RAMACHANDRA RAO.—We will draw the attention of the local bodies and try to rectify the irregularities.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಡಿಸ್ಟ್ರಿಕ್ಟ್ ಬೋರ್ಡ್‌ನ ಶಿಬ್ಬಂದಿ ಇಲ್ಲದೆ ಕಟ್ಟಡದ ಕೆಲಸಗಳು ನಡೆಯದೇ ಇರುವುದರಿಂದ ಸರ್ಕಾರದವರು ಈಗ ತಾನೆ ಅಪ್ಪಣೆ ಕೊಡಿಸಿದಹಾಗೆ ಗವರ್ನಮೆಂಟ್ ಗ್ಯಾರಂಟ್ ಮಂಜೂರುಮಾಡಿ ಪಿ.ಡಬ್ಲ್ಯು.ಡಿ. ಅವರಿಗೆ ವಹಿಸಿಕೊಡತಕ್ಕ ಏರ್ಪಾಡು ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆ ಮಾಡುತ್ತೇವೆ.

———